**ಅಸಲು ದಾವಾ ನಂ:107/2019**
**ಪಿ.ಡಬ್ಲ್ಯೂ: 01**

**ದಿನಾಂಕ: 09-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ ಸಿ ಎಂ ಪ್ರತಿವಾದಿಗಳ ಪರ ವಕೀಲರಿಂದ**

1 ರಿಂದ 4 ನೇ ಪ್ರತಿವಾದಿಗಳು ವ್ಯವಸಾಯವನ್ನು ಮಾಡುತ್ತಾರೆ ಎಂದರೆ ಸರಿ. ನಾನು ಸದರಿ ಪ್ರತಿವಾದಿಗಳನ್ನು ನೋಡಿರುತ್ತೇನೆ. ಸದರಿ ಪ್ರತಿವಾದಿಯರಿಗೆ ವ್ಯವಸಾಯವನ್ನು ಹೊರತುಪಡಿಸಿ ಬೇರೆ ಆದಾಯ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿನ ಸರ್ವೇ ನಂ.8/1 ಆಗಿರುತ್ತದೆ. ದಾವಾ ಅನುಸೂಚಿ ಸ್ವತ್ತನ್ನು ಹೊರತುಪಡಿಸಿ 1 ರಿಂದ 4 ನೇ ಪ್ರತಿವಾದಿಗಳಿಗೆ ಬೇರೆ ಯಾವುದೇ ಆದಾಯದ ಮೂಲ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ದಾವಾ ಅನುಸೂಚಿ ಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನುಗಳು ಇರುವುದನ್ನು ನಾನು ಕೇಳಿರುವುದಿಲ್ಲ. ಪ್ರತಿವಾದಿಯರಿಗೆ ದಾವಾ ಅನುಸೂಚಿ ಸ್ವತ್ತು ಪಾಲುವಿಭಾಗದ ಮುಖಾಂತರ ಬಂದಿರುವ ಆಸ್ತಿ ಎಂದರೆ ಸರಿ. ಸದರಿ ಪಾಲುವಿಭಾಗದ ಪತ್ರದ ಮುಖಾಂತರ 1 ನೇ ಪ್ರತಿವಾದಿಯರ ಹೆಸರಿಗೆ ನಿಪಿ:6 ರಂತೆ ಮ್ಯೂಟೇಶನ್ ಆಗಿದ್ದು ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ:6 ಮ್ಯೂಟೇಶನ್ ಪ್ರತಿಯನ್ನು ಯಾರು ತಂದು ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ:6 ಮ್ಯೂಟೇಶನ್ ಪ್ರತಿಯ ಪ್ರಕಾರ 1 ನೇ ಪ್ರತಿವಾದಿಗೆ ದಾವಾ ಅನುಸೂಚಿ ಸ್ವತ್ತು ಮಾತ್ರ ಇದೆ ಎಂದು ಸೂಚಿಸುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತನ್ನು ಹೊರತುಪಡಿಸಿ 1 ನೇ ಪ್ರತಿವಾದಿ ಈರಣ್ಣ ಮತ್ತು ಆತನ ಮಕ್ಕಳಿಗೆ ಅಂದರೆ 3 ಮತ್ತು 4 ನೇ ಪ್ರತಿವಾದಿಯರಿಗೆ ಬೇರೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಪಿ:1 ರ ಖರೀದಿ ಕರಾರು ಪತ್ರವನ್ನು 1 ರಿಂದ 4 ನೇ ಪ್ರತಿವಾದಿಯರೇ ಮಾಹಿತಿಯನ್ನು ನೀಡಿ ಹೇಳಿ ಬರೆಸಿರುತ್ತಾರೆ. ಪ್ರತಿವಾದಿಯರು ಕುಟುಂಬ ನಿರ್ವಹಣೆಗಾಗಿ ನಿಪಿ:1 ರ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಕುಟುಂಬ ನಿರ್ವಹಣೆ ಎಂದರೆ ಯಾವ ಕಾರಣ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿರ್ದಿಷ್ಟವಾದ ಕಾರಣವನ್ನು ತಿಳಿಸಿರುವುದಿಲ್ಲ ಬದಲಾಗಿ ಮನೆಯ ಸಾಲವನ್ನು ತೀರಿಸಲು ಮತ್ತು ಮನೆಯ ಖರ್ಚನ್ನು ನಿಭಾಯಿಸಲು ಎಂದು ಹೇಳಿದ್ದರು ಎಂದು ಉತ್ತರಿಸುತ್ತಾರೆ. ನಿಪಿ:1 ರ ಖರೀದಿ ಕರಾರು ಪತ್ರದಲ್ಲಿ ಇತರೆ ಸ್ಥಿರಾಸ್ತಿಗಳು ಎಂದು ನಮೂದು ಆಗಿದೆ, ಇತರೆ ಸ್ಥಿರಾಸ್ತಿಗಳು ಯಾವವು ಎಂದು ನಿರ್ದಿಷ್ಟವಾಗಿ ನಮೂದು ಮಾಡಿರುವುದಿಲ್ಲ. ಸದರಿ ಇತರೆ ಸ್ಥಿರಾಸ್ತಿಗಳ ಬಗ್ಗೆ ನಿರ್ದಿಷ್ಟವಾಗಿ ನಮೂದು ಮಾಡುವಂತೆ ನಾನು ಪ್ರತಿವಾದಿಯರಿಗೆ ತಿಳಿಸಿರುವುದಿಲ್ಲ.

ನನ್ನ ಬಳಿ ಹಣವನ್ನು ಕೇಳಲು ಚಂದ್ರಣ್ಣ ಬಿನ್ ತಿಮ್ಮಣ್ಣ, ಪವನ ಬಿನ್ ರಾಮಣ್ಣ ಮತ್ತು ತಿಪ್ಪೇರುದ್ರಪ್ಪರವರು ಬಂದಿದ್ದರು. ದಿಃ17-06-2013 ರಂದು ಸದರಿಯವರು ನನ್ನ ಬಳಿ ಬಂದಿದ್ದರು. ಸದರಿ ದಿನದಂದೇ ನಾನು ನಗದು ರೂಪದಲ್ಲಿ ರೂ.4,25,000/- ಹಣವನ್ನು 1 ನೇ ಪ್ರತಿವಾದಿಗೆ ನೀಡಿರುತ್ತೇನೆ. ನನ್ನ ಬಳಿ ಅಷ್ಟು ಮೊತ್ತದ ನಗದು ಹಣ ಲಭ್ಯವಿತ್ತು. ಸದರಿ ಹಣವನ್ನು ನಾನು ಮಾಡುವ ಚಿನ್ನ, ಬೆಳ್ಳಿ ವ್ಯಾಪಾರ ಮತ್ತು ವ್ಯವಸಾಯದ ಮೂಲದಿಂದ ಆದಾಯ ಬರುತ್ತದೆ. ನಾನು ಪ್ರತಿವರ್ಷ ತೆರಿಗೆ ಪಾವತಿಯನ್ನು ಮಾಡುತ್ತೇನೆ. ಸದರಿ ರೂ.4,25,000/- ಹಣದ ಬಗ್ಗೆ ತೆರಿಗೆ ಪಾವತಿಯಲ್ಲಿ ಜಮೀನು ಖರೀದಿ ಬಾಬ್ತು ಎಂದು ತೋರಿಸಿರುತ್ತೇನೆ. ಸದರಿ ತೆರಿಗೆ ಪಾವತಿ ದಾಖಲೆಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಜಮೀನು ಖರೀದಿಯ ಮಾತುಕತೆಯನ್ನು ದಿಃ17-06-2013 ರಂದು ನಡೆದಿತ್ತಾ ಎಂದು ಸೂಚಿಸಿದ ಪ್ರಶ್ನೆ ಸಾಕ್ಷಿಯು ಸರಿಯಲ್ಲ ಎಂದು ಉತ್ತರಿಸಿ, ಸದರಿ ದಿನಾಂಕಕ್ಕಿಂತ ಒಂದು ವಾರದ ಮುಂಚೆ ಮಾತುಕತೆ ಆಗಿತ್ತು ಎಂದು ಉತ್ತರಿಸುತ್ತಾರೆ. ಸದರಿ ಜಮೀನು ಖರೀದಿ ಮಾತುಕತೆಯನ್ನು ನಮ್ಮ ಅಂಗಡಿಯಲ್ಲಿ ಅಂದರೆ ಕಾಳಿಕಾಂಬ ಜ್ಯುವೇಲರಿ ಶಾಪ್ ನಲ್ಲಿ ನಡೆದಿತ್ತು. ಸದರಿ ಮಾತುಕತೆಯ ಸಮಯದಲ್ಲಿ ಚಂದ್ರಪ್ಪ ಬಿನ್ ತಿಮ್ಮಪ್ಪ, 1 ನೇ ಪ್ರತಿವಾದಿ ಈರಣ್ಣ ಮತ್ತು 3 ನೇ ಪ್ರತಿವಾದಿ ವೀರಭದ್ರ ಬಂದಿದ್ದರು. ಸದರಿ ಮಾತುಕತೆಗೆ 1 ನೇ ಪ್ರತಿವಾದಿಯ ಪತ್ನಿ ಸುಶೀಲಮ್ಮ ಮತ್ತು ಮತ್ತೊಬ್ಬ ಮಗನಾದ 4 ನೇ ಪ್ರತಿವಾದಿ ಅಜ್ಜಣ್ಣ ಮತ್ತು ಇನ್ನೊಬ್ಬ ಮಗಳು ಬಂದಿರಲಿಲ್ಲ. ಸದರಿ ದಿನದಂದು ಆದ ಮಾತುಕತೆಯ ಬಗ್ಗೆ 1 ನೇ ಪ್ರತಿವಾದಿಯ ಮಗಳು ಮತ್ತು ಇನ್ನೊಬ್ಬ ಮಗನಾದ 4 ನೇ ಪ್ರತಿವಾದಿ ಅಜ್ಜಣ್ಣರವರಿಗೆ ತಿಳಿದಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಕ್ರಯ ಪತ್ರ ಮಾಡಿಸುವ ದಿನದ ಸಂಪೂರ್ಣ ಮಾಹಿತಿ ಇತ್ತು ಎಂದು ಉತ್ತರಿಸುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.